ಇ) 1993-94ನೇ ಸಾಲಿನಲ್ಲಿ ಜಮ್ಮನಕಟ್ಟಿ, ಬೇಲೂರು, ಕಟಗೇರಿ, ಕಾತರಕಿ ಹಾಗೂ 1994-95ನೇ ಸಾಲಿನಲ್ಲಿ ಹೊಲಗೇರಿ ಗ್ರಾಮಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

ಈ) ಹಣಕಾಸಿನ ಅನುಕೂಲತೆಗಳಿಗೆ ಅನುಗುಣವಾಗಿ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳನ್ನು ಪ್ರಾರಂಭಿಸುವಾಗ ಆದ್ಯತೆ ನೀಡಲಾಗುವುದು.

ವಿಷಯ:- ಗ್ರಾಮೀಣ ಪ್ರದೇಶಗಳಿಗೆ ಸಂಚಾರಿ ಗ್ರಂಥಾಲಯಗಳ ವಿಸ್ತರಣೆ.

1308 (2073) **ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):-** ಮಾನ್ಯ ವಯಸ್ಕರ ಮತ್ತು ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಈಗಾಗಲೇ ನಗರ ಪ್ರದೇಶಗಳಲ್ಲಿರುವ ಸಂಚಾರಿ ಗ್ರಂಥಾಲಯಗಳ ಸಂಖ್ಯೆಯನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಯಾವ ಅವಧಿಯಿಂದ ವಿಸ್ತರಿಸಲಾಗುತ್ತದೆ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ರಾಜ್ಯದಲ್ಲಿರುವ ಆಯುರ್ವೇದ ಹಾಗೂ ಹೋಮಿಯೋಪತಿ ಕಾಲೇಜುಗಳು.

1309 (2072) **ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):-** ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಆಯುರ್ವೇದ ಕಾಲೇಜುಗಳು ಹಾಗೂ ಹೋಮಿಯೋಪತಿ ಕಾಲೇಜುಗಳ ಸಂಖ್ಯೆ ಎಷ್ಟು? ಯಾವ ಯಾವ ವರ್ಷದಲ್ಲಿ ಮಂಜೂರಾತಿ ನೀಡಲಾಗಿದೆ?

ಆ) ಅವುಗಳಲ್ಲಿ ಅನುದಾನಕ್ಕೊಳಪಟ್ಟ ಕಾಲೇಜುಗಳಾವುವು? ಯಾವ ವರ್ಷದಿಂದ ಅನುದಾನ ನೀಡಲಾಗಿದೆ?

ಇ) ಅನುದಾನಕ್ಕೊಳಪಡದ ಕಾಲೇಜುಗಳಿಗೆ ನಿರ್ದಿಷ್ಟವಾಗಿ ಯಾವಾಗ ಅನುದಾನ ನೀಡಲಾಗುವುದು?

ಈ) ಭಾರತೀಯ ಪ್ರಾಚೀನ ವೈದ್ಯಪದ್ಧತಿ ಪ್ರೋತ್ಸಾಹಿಸಲು ಕೇಂದ್ರ ಸರ್ಕಾರದ ನೀತಿಯಂತೆ ರಾಜ್ಯ ಸರ್ಕಾರ ಯಾವ ರೀತಿಯಲ್ಲಿ ಪ್ರೋತ್ಸಾಹಿಸುತ್ತಿದೆ?

ಡಾ।। ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು):-

ಅ) ರಾಜ್ಯದಲ್ಲಿ 22 ಆಯುರ್ವೇದ ಕಾಲೇಜುಗಳು ಹಾಗೂ 12 ಹೋಮಿಯೋಪತಿ ಕಾಲೇಜುಗಳಿವೆ. ಕಾಲೇಜು ಮಂಜೂರಾತಿ ನೀಡಿದ ವಿವರಣೆಯನ್ನು ಅನುಬಂಧ–1ರಲ್ಲಿ ತೋರಿಸಿದೆ.

ಆ) ಕೆಳಕಂಡ 5 ಕಾಲೇಜುಗಳು ಅನುದಾನಕ್ಕೊಳಪಟ್ಟಿವೆ.